**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1031 |
| 2 | ಸದಸ್ಯರ ಹೆಸರು | : | ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 22-09-2022 |
| 4 | ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಶ್ರೀನಗರ ಬಡಾವಣೆಯಲ್ಲಿ ರಾಜಕಾಲುವೆ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗಿದೆಯೇ; ಸದರಿ ಕಾಮಗಾರಿಯ ಅಂದಾಜು ಮೊತ್ತವೆಷ್ಟು; | ಬೆಂಗಳೂರು ನಗರದ ಶ್ರೀನಗರ ಬಡಾವಣೆಯಲ್ಲಿ ರೂ.12.50 ಕೋಟಿಗಳ ಅಂದಾಜು ಮೊತ್ತದ ರಾಜಕಾಲುವೆ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ. |
| ಆ) | ಸದರಿ ಕಾಮಗಾರಿಗೆ e-Tender Notification ಹೊರಡಿಸಿದ ದಿನಾಂಕ ಯಾವುದು; ಅಂತಿಮ ದಿನಾಂಕ ಯಾವುದು; e-Tender ನಲ್ಲಿ ಭಾಗವಹಿಸಿರುವ ಗುತ್ತಿಗೆದಾರರ ಸಂಖ್ಯೆ ಎಷ್ಟು; ಗುತ್ತಿಗೆ ಪಡೆದಿರುವವರು ಯಾರ್ಯಾರು; (ಸಂಪೂರ್ಣ ವಿವರವನ್ನು ಒದಗಿಸುವುದು) | ಶ್ರೀನಗರ ಬಡಾವಣೆಯ ರಾಜಕಾಲುವೆ ನಿರ್ಮಾಣ ಕಾಮಗಾರಿಯ ಟೆಂಡರ್ ವಿವರಗಳು ಈ ಕೆಳಕಂಡಂತೆ ಇರುತ್ತದೆ.<br>1. ಟೆಂಡರ್ ಹೊರಡಿಸಿದ ದಿನಾಂಕ: 19-10-2019<br>2. ಅಂತಿಮ ದಿನಾಂಕ: 06-11-2019<br>3. ಭಾಗವಹಿಸಿರುವ ಬಿಡ್ಡುದಾರರು 4 ಜನ<br>Narayan Madaiah Shetty (Suprada Construction Pvt. Ltd.,)<br>K Dodda Hanumanthappa<br>Sri R. Maheshwara Naidu (RMN Infrastructures Ltd)<br>M Rajendra (M R Constructions)<br>4. ಕಾಮಗಾರಿಯ ಗುತ್ತಿಗೆ ಪಡೆದವರು Sri R. Maheshwara Naidu (RMN Infrastructures Ltd) |
| ಇ) | ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಮುಕ್ತಾಯಗೊಳಿಸಲು ಉದ್ದೇಶಿಸಲಾಗಿದೆ; ಕಾಮಗಾರಿಯ ವಿಳಂಬಕ್ಕೆ ಕಾರಣಗಳೇನು; | ಸದರಿ ಕಾಮಗಾರಿಯ ಕರಾರಿನಂತೆ ದಿನಾಂಕ: 18-08-2020 ರಂದು ಕಾಮಗಾರಿಯು ಪ್ರಾರಂಭವಾಗಿ ದಿನಾಂಕ: 17-08-2021ಕ್ಕೆ ಮುಕ್ತಾಯಗೊಳ್ಳಬೇಕಾಗಿರುತ್ತದೆ. ಆದರೆ, ಕೋವಿಡ್-19 ಹಿನ್ನೆಲೆಯಲ್ಲಿ ಕಾಮಗಾರಿಯು ವಿಳಂಬವಾಗಿದ್ದು, ಆಗಸ್ಟ್-2022 ರಂದು ಕಾಮಗಾರಿಯು ಪೂರ್ಣಗೊಂಡಿರುತ್ತದೆ. |
| ಈ) | ಸದರಿ ಕಾಮಗಾರಿಯು ಕಳಪೆ ಗುಣಮಟ್ಟದಿಂದ ಕೂಡಿದ್ದು, ನಿರ್ಮಾಣದ ಹಂತದಲ್ಲಿಯೇ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಂಬಂಧ ಗುತ್ತಿಗೆದಾರರ ವಿರುದ್ಧ ಅಥವಾ ಮೇಲುಸ್ತುವಾರಿ ವಹಿಸಿರುವ ಅಭಿಯಂತರರ ವಿರುದ್ಧ ಕೈಗೊಂಡಿರುವ ಕ್ರಮಗಳೇನು; | ಸದರಿ ಕಾಮಗಾರಿಯು ನಿರ್ಮಾಣ ಹಂತದಲ್ಲಿಯೇ ಕುಸಿದಿರುವುದು ಗಮನಕ್ಕೆ ಬಂದಿರುತ್ತದೆ.<br>ಸದರಿ ಕಾಮಗಾರಿಯು ದಕ್ಷಿಣ ವಲಯದ ಕಾಳಿದಾಸ ಬಸ್ ನಿಲ್ದಾಣದ ಉತ್ತರದ ಕಡೆ ನೀರುಗಾಲುವೆಯ Downstream ಇದ್ದು, ಬೃಹತ್ ನೀರುಗಾಲುವೆಗೆ RCC Box Drain / RCC Retaining wall ನಿರ್ಮಾಣ |

..2/-

| | | |
|---|---|---|
| | | ಕಾಮಗಾರಿಯು ಪ್ರಗತಿಯಲ್ಲಿದ್ದು, ಈ ಹಿಂದೆ 14.0 ಮೀ ಉದ್ದಕ್ಕೆ ಹಾಗೂ 10.0 ಮೀ ಅಗಲ ಎತ್ತರ ಸುಮಾರು 9.50 ಮೀ ನೀರುಗಾಲುವೆಗೆ Covering Slab ಕಾಂಕ್ರೀಟ್ ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ.<br><br>ಈ ಹಿಂದೆ Covering Slab ಕಾಂಕ್ರೀಟ್ ಕಾಮಗಾರಿ ನಿರ್ವಹಿಸಿದ ಮಾದರಿಯಲ್ಲಿಯೇ ನಂತರದ ಮುಂದಿನ 15.0 ಮೀ ಉದ್ದದ ನೀರುಗಾಲುವೆಗೆ Covering Slab ಕಾಂಕ್ರೀಟ್ ಅಳವಡಿಸಲು ಉದ್ದೇಶಿಸಲಾಗಿತ್ತು. RMC Concrete ಒದಗಿಸುತ್ತಿರುವ ಸಮಯದಲ್ಲಿ ಕಾಂಕ್ರೀಟ್ ಹಾಕಲು ನಿಗಧಿಪಡಿಸಿರುವ ಸೆಂಟ್ರಿಂಗ್ ಶೀಟಿನ ಮೇಲೆ ಕಾಂಕ್ರೀಟ್ ಪಂಪಿನ್ ಪೈಪ್ ಹಾದು ಹೋಗಿದ್ದು, ಪೈಪ್‌ಲೈನ್ ನಿಲ್ಲಲು ಜೋಡಿಸಿದ ಸ್ತಂಭಗಳು ಹಾಗೂ ಸೆಂಟ್ರಿಂಗ್ ಶೀಟಿನ ನಡುವೆ ಪಂಪಿನ ಒತ್ತಡಕ್ಕೆ ಪೈಪ್ ಹೋಲ್ಡರ್ ಹಾಗೂ ಸೆಂಟ್ರಿಂಗ್ ಶೀಟಿನ ನಡುವೆಯ ಘರ್ಷಣೆ ಹಾಗೂ ಕಾಂಕ್ರೀಟ್‌ಅನ್ನು ಒಂದೇ ಬದಿಯಲ್ಲೇ ಹಾಕಿದ್ದರಿಂದ ಈ ಅನಾಹುತ ಸಂಭವಿಸಿರುತ್ತದೆಯೇ ಹೊರತು, ಯಾವುದೇ ಕಳಪೆ ಗುಣಮಟ್ಟದಿಂದ ಕೂಡಿರುವುದಿಲ್ಲ.<br><br>ಸದರಿ ಕಾಮಗಾರಿಯ ಗುತ್ತಿಗೆದಾರರಿಗೆ ರೂ. 1.00 ಲಕ್ಷಗಳ ಹಾಗೂ ಸಮಾಲೋಚಕರಿಗೆ ರೂ. 50.00 ಸಾವಿರಗಳ ದಂಡವನ್ನು ವಿಧಿಸಲಾಗಿರುತ್ತದೆ<br><br>ಮುಂದುವರೆದು, ಕಾಮಗಾರಿಯ ಮೇಲುಸ್ತುವಾರಿ ವಹಿಸಿರುವ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಅಭಿಯಂತರರುಗಳಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಲಾಗಿರುತ್ತದೆ. |
| ಉ) | ಕಳಪೆ ಕಾಮಗಾರಿಯಿಂದಾಗಿ ನಿರ್ಮಾಣ ಹಂತದಲ್ಲೇ ಕುಸಿದು ಸಂಕಷ್ಟಕ್ಕೀಡಾಗಿರುವ ಕೂಲಿಕಾರ್ಮಿಕರ ಸಂಖ್ಯೆ ಎಷ್ಟು; ಈ ಕೂಲಿ ಕಾರ್ಮಿಕರಿಗೆ ಸರ್ಕಾರದಿಂದ ನೀಡಿರುವ ಪರಿಹಾರ ಎಷ್ಟು? | ಸದರಿ ಕಾಮಗಾರಿಯು ನಿರ್ಮಾಣ ಹಂತದಲ್ಲಿಯೇ ಕುಸಿದಿರುವುದರಿಂದ ನಾಲ್ಕು ಜನ ಕಾರ್ಮಿಕರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಗಾಯಗೊಂಡ ಕಾರ್ಮಿಕರಿಗೆ ಗುತ್ತಿಗೆದಾರರ ವತಿಯಿಂದ ತಲಾ ರೂ. 25,000-00 ಗಳ ಪರಿಹಾರವನ್ನು ನೀಡಲಾಗಿರುತ್ತದೆ. |

**ಸಂಖ್ಯೆ: ನಅಇ 786 ಎಂಎನ್‌ವೈ 2022 (ಇ)**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ